ಕೃಷಿ ಪರಿಕರ ಮಾರಾಟಗಾರರಿಗೆ ತರಬೇತಿ



ಕೃಷಿ ವಿಶ್ವವಿದ್ಯಾನಿಲಯದ ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಸಭಾಂಗಣದಲ್ಲಿ ದೇಸಿ ಕಾರ್ಯ ಕ್ರಮವನ್ನು ಡಾ.ಪಿ. ಚಂದ್ರಶೇಖರ್ ಉದ್ಘಾಟಿಸಿದರು. ಡಾ.ಕೆ.ಶಿವರಾಮು, ಡಾ.ಸಿದ್ದಯ್ಯ, ಮತ್ತಿತರರಿದ್ದರು.

ಸಂ.ಕ.ಸಮಾಚಾರ, ಬೆಂಗಳೂರು

ರೈತರಿಗೆ ಸ್ಥಳೀಯವಾಗಿ ಸಿಗುವ ಕೃಷಿ ಪರಿಕರ ಉದ್ದಿಮೆದಾರರಿಗೆ ಕೃಷಿಯಲ್ಲಿ ಒಂದು ವರ್ಷದ ಅವಧಿಯ ತರಬೇತಿಯನ್ನು ನೀಡಿದರೆ ಅವರ ಜ್ಞಾನ ಹೆಚ್ಚಿ ಪರಿಕರಗಳ ಜೊತೆಗೆ ರೈತರಿಗೆ ವೈಜ್ಞಾನಿಕ ಸಲಹೆಯನ್ನು ನೀಡಲು ಸಹಾಯವಾಗುತ್ತದೆ ಎಂದು ಹೈದರಾಬಾದ್ ಮ್ಯಾನೇಜ್ ಸಂಸ್ಥೆಯ ಮಹಾನಿರ್ದೇಶಕ ಡಾ. ಪಿ.ಚಂದ್ರಶೇಖರ್ ಅಭಿಪ್ರಾಯಪಟ್ಟರು.

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ಸಿಬ್ಬಂದಿ ತರಬೇತಿ ಘಟಕ, ವಿಸ್ತರಣಾ ನಿರ್ದೇಶನಾಲಯ, ಮ್ಯಾನೇಜ್, ಹೈದರಾಬಾದ್ ಮತ್ತು ಕೃಷಿ ಇಲಾಖೆಯ ಆಶ್ರಯದಲ್ಲಿ ಕೃಷಿ ಪರಿಕರ ಮಾರಾಟಗಾರರಿಗೆ ಕೃಷಿ ವಿಸ್ತರಣಾ ಸೇವೆಯಲ್ಲಿ ಡಿಪ್ಲೊಮಾ (ದೇಸಿ) ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ಯಾರಾ ವಿಸ್ತರಣಾ ಕಾರ್ಯಕರ್ತರಾಗಿ ಸಹ ಸೇವೆ ಸಲ್ಲಿಸಲು ಸಹಕಾರಿಯಾಗುತ್ತದೆ. ರೈತರು ಲಾಭಗಳಿಸಿದಾಗ ಮಾತ್ರ ಉದ್ದಿಮೆದಾರರ ವ್ಯಾಪಾರ ಹೆಚ್ಚಲು ಸಹಾಯವಾಗುತ್ತದೆ. ಪ್ರಪಂಚದ ವಿವಿಧೆಡೆಯಲ್ಲಿನ ಕೃಷಿ ಪ್ರಗತಿಯ ಬಗ್ಗೆ ಕುಳಿತಲ್ಲಿಯೇ ತಿಳಿದುಕೊಳ್ಳಲು ಸಾಮಾಜಿಕ ಜಾಲತಾಣಗಳ ಸಮರ್ಪಕ ಬಳಕೆ ಅನಿವಾರ್ಯ. ವ್ಯಾಪಾರ ವೃದ್ಧಿಸಲು ವಾಟ್ಸಪ್ ಗುಂಪುಗಳು ಮತ್ತು ವಿಸಿಟಿಂಗ್ ಕಾರ್ಡ್‌ಗಳು ಅತ್ಯಂತ ಅವಶ್ಯಕ ಮತ್ತು ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಸಂಖ್ಯೆಯ ರೈತರಿಗೆ ತಲುಪಲು ಸಹಕಾರಿ ಎಂದು ಅಭಿಪ್ರಾಯಪಟ್ಟರು.

ಕೃಷಿ ವಿವಿ ನಿರ್ದೇಶಕ ಡಾ.ಕೆ.ನಾರಾಯಣಗೌಡ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಹಲವಾರು ರೈತಪರ ಕಾರ್ಯಕ್ರಮಗಳಲ್ಲಿ ದೇಸಿ ಕಾರ್ಯಕ್ರಮವು ಅತ್ಯುತ್ತಮ ಕಾರ್ಯಕ್ರಮ. ಕೃಷಿ ಪರಿಕರ ಉದ್ದಿಮೆದಾರರು ತಮ್ಮದೇ ಆದ ಒಂದು ಸಂಘವನ್ನು ರಚಿಸಿಕೊಂಡರೆ ವಿಚಾರ ವಿನಿಮಯ ಮಾಡಿಕೊಳ್ಳಲು ಮತ್ತು ಸರ್ಕಾರದ ನೀತಿ ನಿಯಮಗಳ ಬಗ್ಗೆ ಬೆಳಕು ಚೆಲ್ಲಲು ಸಹಾಯವಾಗುತ್ತದೆ ಎಂದರು. ತರಬೇತಿ ಸಂಯೋಜಕ ಡಾ.ಕೆ.ಶಿವರಾಮು, ಡಾ.ಸಿದ್ದಯ್ಯ,ಡಾ.ಬಿ.ಕಲ್ಪನಾ,ಡಾ:ಸಿ.ವಿ.ವೆಂಕಟೇಶಮೂರ್ತಿ, ಡಾ ಎಚ್.ಕೆ.ರಾಮಪ್ಪ ಮತ್ತಿತರರಿದ್ದರು.

13-10-2022
S-Karnataka
Pg 10

13-10-2022
Kannadaprbha
Pg 02



ಹೆಬ್ಬಾಳದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ದೇಸಿ ತರಬೇತಿ ಕಾರ್ಯಕ್ರಮಕ್ಕೆ ಹೈದರಾಬಾದ್‌ನ ಮ್ಯಾನೇಜ್ ಸಂಸ್ಥೆಯ ಮಹಾ ನಿರ್ದೇಶಕ ಡಾ। ಪಿ.ಚಂದ್ರಶೇಖರ್, ಬೆಂಗಳೂರು ಕೃಷಿ ವಿವಿ ವಿಸ್ತರಣಾ ನಿರ್ದೇಶಕ ಡಾ। ಕೆ.ನಾರಾಯಣಗೌಡ ಸಸಿಗೆ ನೀರೆರೆಯುವ ಮೂಲಕ ಚಾಲನೆ ನೀಡಿದರು.

ಕೃಷಿ ವಿವಿಯಲ್ಲಿ 'ದೇಸಿ' ತರಬೇತಿ

ಕೃಷಿಗೂ ಸೋಷಿಯಲ್ ಮೀಡಿಯಾಗಳ ಬಳಕೆ

ಬೆಂಗಳೂರು: ಕೃಷಿ ಕ್ಷೇತ್ರದ ಮಾಹಿತಿ ತಿಳಿಸಲು ಸಾಮಾಜಿಕ ಜಾಲತಾಣಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಇದರಿಂದ ಕಡಿಮೆ ಸಮಯದಲ್ಲಿ ಹೆಚ್ಚು ಜನರನ್ನು ತಲುಪಬಹುದು ಎಂದು ಹೈದರಾಬಾದ್‌ನ ಮ್ಯಾನೇಜ್ ಸಂಸ್ಥೆಯ ಮಹಾ ನಿರ್ದೇಶಕ ಡಾ। ಪಿ.ಚಂದ್ರಶೇಖರ ಅಭಿಪ್ರಾಯಪಟ್ಟರು.

ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕೃಷಿ ಪರಿಕರ ಮಾರಾಟಗಾರರಿಗೆ ಹಮ್ಮಿಕೊಂಡಿದ್ದ ದೇಸಿ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೃಷಿ ಪ್ರಗತಿಯ ಬಗ್ಗೆ ಕುಳಿತಲ್ಲಿಯೇ ತಿಳಿದುಕೊಳ್ಳಲು ಸಾಮಾಜಿಕ ಜಾಲತಾಣಗಳ ಬಳಕೆ ಅನಿವಾರ್ಯವಾಗಿದೆ. ವ್ಯಾಪಾರ ವೃದ್ಧಿಸಲು ವಾಟ್ಸ್‌ಆ್ಯಪ್ ಗುಂಪು ಮತ್ತು ವಿಸಿಟಿಂಗ್ ಕಾರ್ಡ್‌ಗಳು ಅತ್ಯಂತ ಅವಶ್ಯಕವಾಗಿವೆ. ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಸಂಖ್ಯೆಯ ರೈತರನ್ನೂ ತಲುಪಬಹುದು ಎಂದು ಸಲಹೆ ನೀಡಿದರು. ಬೆಂಗಳೂರು ಕೃಷಿ ವಿವಿ ವಿಸ್ತರಣಾ ನಿರ್ದೇಶಕ ಡಾ। ಕೆ.ನಾರಾಯಣಗೌಡ, ತರಬೇತಿ ಸಂಯೋಜಕ ಡಾ। ಕೆ.ಶಿವರಾಮು, ಸಹ ಪ್ರಾಧ್ಯಾಪಕ ಡಾ। ವೆಂಕಟೇಶಮೂರ್ತಿ ಹಾಜರಿದ್ದರು.

ಕೃಷಿ ವಿವಿಗೆ ಡ್ರೋನ್ ಕಾಣಿಕೆ

■ ಜಗನ್ನಾಥ ಆರ್.ದೇಸಾಯಿ
ರಾಯಚೂರು
jagannath.r@timesgroup.com

ಡ್ರೋನ್ ಬಳಸಿ ಕ್ರಿಮಿನಾಶಕ ಸಿಂಪಡಣೆ ಸಾಧ್ಯ ಎಂಬುದನ್ನು ಸಂಶೋಧನೆಯ ಮೂಲಕ ಖಚಿತಪಡಿಸಿದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ಮೂರು ಡ್ರೋನ್‌ಗಳನ್ನು ಒದಗಿಸಲಿದ್ದು, ಕೃಷಿ ಚಟುವಟಿಕೆಗಳಿಗೆ ವೇಗ ದೊರೆಯುವ ನಿರೀಕ್ಷೆಯಿದೆ.

ಆಧುನಿಕ ತಂತ್ರಜ್ಞಾನದ ಡ್ರೋನ್ ಯಂತ್ರವನ್ನು ಸಾಮಾನ್ಯವಾಗಿ ಭದ್ರತಾ ಕಾರ್ಯಗಳಿಗೆ ಬಳಸಲಾಗುತ್ತದೆ. ಸಬ್ ಮಿಷನ್ ಅಗ್ರಿಕಲ್ಚರ್ ಮೆಕ್ಯಾನಿಸಂ ಕಾರ್ಯಕ್ರಮದಡಿ ಮೂರು ಡ್ರೋನ್‌ಗಳನ್ನು ವಿವಿ ವ್ಯಾಪ್ತಿಯಲ್ಲಿ ಬಳಸಲು ಅವಕಾಶ ದೊರೆತಿದೆ. ರಾಯಚೂರು, ಕಲಬುರಗಿ ಮತ್ತು ಗಂಗಾವತಿಯ ಕೃಷಿ ವಿಜ್ಞಾನ ಕೇಂದ್ರಗಳಿಗೆ ತಲಾ ಒಂದು ಡ್ರೋನ್ ವಿತರಿಸಲು ನಿರ್ಧರಿಸಲಾಗಿದೆ.

ಕ್ರಿಮಿನಾಶಕ ಸಿಂಪಡಣೆಗೆ ವಿನೂತನ ಹಾದಿ



ನಿಮಿಷಕ್ಕೆ 3 ಲೀಟರ್ ಸಿಂಪರಣೆ: ತಲಾ 23 ಕೆ.ಜಿ. ತೂಕದ ಡ್ರೋನ್‌ಗಳು ಬ್ಯಾಟರಿ ಮೂಲಕ 20 ಲೀಟರ್ ಕ್ರಿಮಿನಾಶಕ ಹೊತ್ತೊಯ್ಯುವ ಸಾಮರ್ಥ್ಯ ಹೊಂದಿವೆ. 21 ನಿಮಿಷ ಕಾರ್ಯನಿರ್ವಹಿಸುವ ಬ್ಯಾಟರಿ ಹೊಂದಿರುವ ಈ ಡ್ರೋನ್‌ಗಳು ಪ್ರತಿ ನಿಮಿಷಕ್ಕೆ 3ಲೀಟರ್ ಕ್ರಿಮಿನಾಶಕ ಸಿಂಪರಣೆ ಸಾಮರ್ಥ್ಯ ಹೊಂದಿವೆ ಎಂದು ಕೃಷಿ ವಿವಿ ಮೂಲಗಳು ತಿಳಿಸಿವೆ. ತಲಾ 10ಲಕ್ಷ ರೂ. ಅಂದಾಜು ಮೊತ್ತದ ಡ್ರೋನ್ ಯಂತ್ರಗಳು ರಾಯಚೂರು ವಿವಿ ವ್ಯಾಪ್ತಿಯಲ್ಲಿ ಪ್ರಾಯೋಗಿಕ ಬಳಕೆಗೆ ಸನ್ನದ್ಧವಾಗಲಿವೆ. ರಾಯಚೂರಿನಲ್ಲಿ ಮಿಶ್ರ ಬೆಳೆ, ಕಲಬುರಗಿಯಲ್ಲಿ ತೊಗರಿ ಹಾಗೂ ಗಂಗಾವತಿಯಲ್ಲಿ ಭತ್ತದ ಬೆಳೆಗೆ ಕ್ರಿಮಿನಾಶಕ ಸಿಂಪರಣೆಗೆ ಈ ಡ್ರೋನ್‌ಗಳನ್ನು ಬಳಸಲು ಉದ್ದೇಶಿಸಲಾಗಿದೆ.

ಏನೇನು ಉಪಯೋಗ?: ಡ್ರೋನ್‌ಗಳನ್ನು ಬಳಸಿ ಬೆಳೆಗಳಿಗೆ ಮೇಲ್ಭಾಗದಿಂದ ಕ್ರಿಮಿನಾಶಕ ಸಿಂಪಡಿಸುವ ಮೂಲಕ ಕೀಟನಾಶಕ್ಕೆ ನೆರವಾಗಲಿದೆ. ಎತ್ತರದಲ್ಲಿ ಬೆಳೆಯುವ ಬೆಳೆಗಳಿಗೆ ಡ್ರೋನ್ ಮೂಲಕ ಕ್ರಿಮಿನಾಶಕ ಸಿಂಪರಣೆ ಪರಿಣಾಮಕಾರಿಯಾಗಿದೆ. ಭವಿಷ್ಯದಲ್ಲಿ ಈ ತಂತ್ರಜ್ಞಾನ ಸಾಕಷ್ಟು ಉಪಯೋಗಕ್ಕೆ ಬರಲಿದೆ. ಅಷ್ಟೇ ಅಲ್ಲ ಹಣ ಮತ್ತು ಸಮಯ ಉಳಿಯಲಿದೆ ಎಂಬ ವಿಶ್ವಾಸವಿದೆ.

ಕೇಂದ್ರದ ಐಸಿಎಆರ್‌ನಿಂದ ರಾಯಚೂರು ಕೃಷಿ ವಿವಿಗೆ ಮೂರು ಡ್ರೋನ್‌ಗಳು ಮಂಜೂರಾಗಿದ್ದು, ರಾಯಚೂರು, ಗಂಗಾವತಿ ಮತ್ತು ಕಲಬುರಗಿ ಕೃಷಿ ವಿಜ್ಞಾನ ಕೇಂದ್ರಗಳಿಗೆ ಒದಗಿಸಲಾಗುವುದು. ರೈತರಿಗೆ ಪ್ರಾಯೋಗಿಕ ಮಾಹಿತಿ ನೀಡಲು ಬಳಸಲಾಗುತ್ತದೆ. ಡ್ರೋರ್ಣ ಬಳಸಿ ಕ್ರಿಮಿನಾಶಕ ಸಿಂಪರಣೆ ಸುಲಭವಾಗಲಿದೆ.

-ಡಾ.ಕೆ.ಎನ್.ಕಟ್ಟಿಮನಿ,
ಕುಲಪತಿಗಳು, ರಾಯಚೂರು ಕೃಷಿ ವಿಜ್ಞಾನಗಳ ವಿವಿ ರಾಯಚೂರು

13-10-2022
V-Karnataka
Pg 08

ರೇಷ್ಮೆ ವ್ಯಾಸಂಗ ಮಾಡಿರುವ ಕೃಷಿಕರ ಮಕ್ಕಳು ನಿರುದ್ಯೋಗಿಗಳಾಗುವ ಆತಂಕ

ರೇಷ್ಮೆ ಇಲಾಖೆ ವಿಲೀನಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇಷ್ಮೆ ಇಲಾಖೆಯನ್ನು ಕೃಷಿ ಇಲಾಖೆಯೊಂದಿಗೆ ವಿಲೀನಗೊಳಿಸುವ ಪ್ರಕ್ರಿಯೆಯನ್ನು ಕೈಬಿಡಬೇಕು ಎಂದು ಕರ್ನಾಟಕ ರಾಜ್ಯ ರೇಷ್ಮೆ ಕೃಷಿ ಹಿತರಕ್ಷಣಾ ವೇದಿಕೆ ಆಗ್ರಹಿಸಿದೆ.

'ಕೃಷಿ ಇಲಾಖೆಯೊಂದಿಗೆ ವಿಲೀನಗೊಳಿಸುವುದರಿಂದ ರೇಷ್ಮೆ ಇಲಾಖೆಯ ಚಟುವಟಿಕೆಗಳಿಗೆ ಮತ್ತು ರೈತರಿಗೆ ಪ್ರತಿನಿತ್ಯ ಸಿಗಬೇಕಾದ ತಾಂತ್ರಿಕ ಸಲಹೆ ಮತ್ತು ಸೌಲಭ್ಯಗಳು ಮರೀಚಿಕೆಯಾಗುತ್ತವೆ' ಎಂದು ವೇದಿಕೆಯ ರಾಜ್ಯ ಸಂಚಾಲಕ ಮಳ್ಳೂರು ಶಿವಣ್ಣ ಬುಧವಾರ ಸುದ್ದಿಗೋಷ್ಠಿಯಲ್ಲಿ ಆತಂಕ ವ್ಯಕ್ತಪಡಿಸಿದರು.

'ರೇಷ್ಮೆ ಬೆಳೆಯನ್ನು ಲಾಭದಾಯಕವಾಗಿ ಮಾಡಿಕೊಳ್ಳುವುದು ಸಾಧ್ಯವಾಗಬೇಕಾದರೆ ಇಲಾಖೆಯಲ್ಲಿ ತಾಂತ್ರಿಕ ಸಿಬ್ಬಂದಿ ಅಗತ್ಯವಿದೆ. ಇಲಾಖೆಗೆ ಮಂಜೂರಾಗಿರುವ 2,346 ಹುದ್ದೆಗಳನ್ನು ರಾಜ್ಯ ಸರ್ಕಾರ ರದ್ದು ಮಾಡುವ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬೇಕು. ಇಲ್ಲದಿದ್ದರೆ ಇಲಾಖೆಯು ನಶಿಸಿ ಲಕ್ಷಾಂತರ ರೇಷ್ಮೆ ಕುಟುಂಬಗಳು ನಿರುದ್ಯೋಗಿಗಳಾಗುವ ಸಂಭವ ಇದೆ' ಎಂದರು.

ಮೊದಲ ಸ್ಥಾನದಲ್ಲಿ ಕರ್ನಾಟಕ

'ದೇಶದಲ್ಲಿಯೇ ಕರ್ನಾಟಕ ಶೇ 60ರಷ್ಟು ರೇಷ್ಮೆ ಉತ್ಪಾದನೆ ಮಾಡುತ್ತಿದ್ದು, ಮೊದಲ ಸ್ಥಾನದಲ್ಲಿದೆ' ಎಂದು ಮಳ್ಳೂರು ಶಿವಣ್ಣ ಮಾಹಿತಿ ನೀಡಿದರು.

'ರಾಜ್ಯದಲ್ಲಿ 1.46 ಲಕ್ಷ ಕುಟುಂಬಗಳು ರೇಷ್ಮೆ ಕೃಷಿಯನ್ನು ಅವಲಂಬಿಸಿವೆ. ರೇಷ್ಮೆ ಬೆಳೆಗಾರರು ₹2ಲಕ್ಷ ಕೋಟಿ ಬಂಡವಾಳ ಹೂಡಿಕೆ ಮಾಡಿ ವಾರ್ಷಿಕ ₹3 ಸಾವಿರ ಕೋಟಿ ಮೌಲ್ಯದ ರೇಷ್ಮೆ ಗೂಡನ್ನು ಬೆಳೆದು ಮಾರಾಟ ಮಾಡುತ್ತಿದ್ದಾರೆ. ಸುಮಾರು 10 ಸಾವಿರ ರೇಷ್ಮೆ ನೂಲು ಬಿಚ್ಚಣಿಕಾ ಕುಟುಂಬಗಳಿಗೆ ಉದ್ಯೋಗ ನೀಡಲಾಗಿದೆ' ಎಂದರು.

'₹5 ಸಾವಿರ ಕೋಟಿ ಕಚ್ಚಾ ರೇಷ್ಮೆ ಮಾರಾಟ ಮಾಡಿ 20 ಸಾವಿರ ನೇಕಾರರ ಕುಟುಂಬಗಳಿಗೆ ಉದ್ಯೋಗ ಕಲ್ಪಿಸಲಾಗಿದೆ. ರೇಷ್ಮೆ ಉತ್ಪನ್ನಗಳನ್ನು ತಯಾರಿಸುವ ಮೂಲಕ ಸರ್ಕಾರಕ್ಕೆ ಶೇ 5ರಷ್ಟು ಜಿಎಸ್‌ಟಿ ಆಂದರೆ ₹1,250 ಕೋಟಿ ತೆರಿಗೆ ಪಾವತಿಸಲಾಗುತ್ತಿದೆ' ಎಂದು ವಿವರಿಸಿದರು.

ಮುಖ್ಯಾಂಶಗಳು

- 'ರೇಷ್ಮೆ ಬೆಳೆ ಲಾಭದಾಯಕ ವಾಗಿಸಲು ಇಲಾಖೆಯಲ್ಲಿ ತಾಂತ್ರಿಕ ಸಿಬ್ಬಂದಿ ಅಗತ್ಯ'
- ರೈತರಿಗೆ ಸಿಗಬೇಕಾದ ತಾಂತ್ರಿಕ ಸಲಹೆ ಮರೀಚಿಕೆಯಾಗುವ ಆತಂಕ
- ಇಲಾಖೆಯಲ್ಲಿ ಕಳೆದ 25 ವರ್ಷಗಳಿಂದ ನಡೆಯದ ನೇಮಕಾತಿ ಪ್ರಕ್ರಿಯೆ

'ಇಲಾಖೆಯಲ್ಲಿನ ಸಂಶೋಧನೆ ಮತ್ತು ವಿಸ್ತರಣೆ ಚಟುವಟಿಕೆಗಳಲ್ಲಿ ಉದ್ಯೋಗ ಸಿಗಬಹುದು ಎಂಬ ನಿರೀಕ್ಷೆಯಲ್ಲಿರುವ ಬಿ.ಎಸ್ಸಿ, ರೇಷ್ಮೆ ಮತ್ತು ಎಂ.ಎಸ್ಸಿ ರೇಷ್ಮೆ ವ್ಯಾಸಂಗ ಮಾಡಿರುವ ಕೃಷಿಕರ ಮಕ್ಕಳು ಸಹ ನಿರುದ್ಯೋಗಿಗಳಾಗುವ ಆತಂಕ ಎದುರಾಗಿದೆ' ಎಂದು ಅವರು ತಿಳಿಸಿದರು.

'ರೇಷ್ಮೆ ಇಲಾಖೆಯಲ್ಲಿ ಕಳೆದ 25 ವರ್ಷಗಳಿಂದ ನೇಮಕಾತಿ ಪ್ರಕ್ರಿಯೆ ನಡೆದಿಲ್ಲ. ಆದ್ದರಿಂದ, ನೇರ ನೇಮಕಾತಿ ಮಾಡಿಕೊಂಡು ಇಲಾಖೆಯನ್ನು ಉಳಿಸಿ ಬಲಪಡಿಸಲು ಶ್ರಮಿಸಬೇಕು' ಎಂದು ಒತ್ತಾಯಿಸಿದರು.

'ತಲಘಟ್ಟಪುರದಲ್ಲಿರುವ ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ 78 ವಿಜ್ಞಾನಿಗಳ ಸಂಖ್ಯೆ ಈಗ ಕೇವಲ 18ಕ್ಕೆ ತಲುಪಿದೆ. ಇದರಿಂದ ರೇಷ್ಮೆ ಬೆಳೆಗಾರರಿಗೆ ಕಾಲ ಕಾಲಕ್ಕೆ ಸಿಗಬೇಕಾಗಿದ್ದ ತಾಂತ್ರಿಕ ಸಲಹೆ ಸೂಚನೆಗಳನ್ನು ತಳ ಹಂತದ ಅಧಿಕಾರಿಗಳೇ ನೀಡುವಂತಾಗಿದೆ' ಎಂದು ಹೇಳಿದರು.

13-10-2022
Prajavani
Pg 01

For more information visit
University Library Website
Web - uasbagrilibindia.org
E-mail- librarian@uasbangalore.edu.in